ಇನ್ನೊಬ್ಬರು: ಊರಿನವರ ದನ ಕಾಯುವ ಕಾವಲಯ್ಯನವರು. ತನ್ನದು ಅಂತ ಏನನ್ನೂ ಇಟ್ಟುಕೊಳ್ಳದ ಊರಿನ ಪರಿಚಾರಕ ಇವರು. ಯಾವುದೇ ಸಾಂಸಾರಿಕ ಬಂಧನಗಳಿಲ್ಲದೆ ಒಬ್ಬೊಂಟಿಯಾಗಿದ್ದ ಕಾವಲಯ್ಯನವರು ಕೇರಿಯ ಎಲ್ಲರ ಮನೆಗಳ ದನ ಮತ್ತು ಎಮ್ಮೆಗಳನ್ನು ಹೊಡೆದುಕೊಂಡು ಊರಾಚೆಯ ಕಾವಲಿಗೆ ಮೇಯಿಸಲು ಹೋಗುತ್ತಿದ್ದರು. ಹೊತ್ತು ಕಂತುತ್ತಿದ್ದಂತೆ, ಹೊಲಮಾರನ್ನು ತಟಾಯ್ದು ಬಂದ ದನಕರುಗಳು ಕೆರೆಗೆ ಇಳಿಯುತ್ತಿದ್ದವು. ನೀರುಕುಡಿದ ನಂತರ ತಮ್ಮ ಒಡನಾಡಿ ಕಾವಲಯ್ಯನವರಿಂದ ಬೀಳ್ಕೊಂಡು, ಉದಿಬಾಗಿಲು ದಾಟಿ ಶಾಲಾ ಹುಡುಗರಂತೆ ಗುಂಪಾಗಿ ತಮ್ಮ ತಮ್ಮ ಕೊಟ್ಟಿಗೆಗಳತ್ತ ತೆರಳುತ್ತಿದ್ದವು. ಇದೆಲ್ಲವೂ ಒಂದು ಅಲಿಖಿತ ನಿಯಮದಂತೆ ನಡೆಯುತ್ತಿತ್ತು. ಬೆಳಗಿನಿಂದ ಸಂಜೆವರೆಗೂ ಕಾವಲಿನಲ್ಲಿ ಬಿದ್ದಿರುತ್ತಿದ್ದ ದನಕರುಗಳ ಸಗಣಿಯನ್ನು ಈಚಲು ಮಂಕರಿಯಲಿ ಜತನದಿಂದ ಹೊತ್ತುತರುತ್ತಿದ್ದ ಕಾವಲಯ್ಯನವರು, ಅದನ್ನು ಊರ ಮುಂದಲ ತಿಪ್ಪೆಗೆ ಸುರಿಯುತ್ತಿದ್ದರು. ಇದರ ಜೊತೆಗೆ ದನಕರುಗಳಿಗೆ ಬರುವ ಜಡ್ಡು ಜಾಪತ್ರೆಗಳಿಗೆ ಮದ್ದು ನೀಡುತ್ತಿದ್ದರು. ಮುದ್ದಹನುಮಕ್ಕನ ಪಾಳ್ಯ, ಬೋರ್ಗಾನಹಳ್ಳಿ, ಕಗ್ಗೆರೆ, ಅಸಲಿಪುರ, ಸಿಂಪೂರ, ರಂಗನಾಥಪುರ ಮುಂತಾದ ನಮ್ಮ ಸುತ್ತಲ ಹಳ್ಳಿಯವರು ತಮ್ಮ ದನಕರುಗಳಿಗೆ ರೋಗರುಜಿನ ಬಂದರೆ, ಕಾವಲಯ್ಯನವರ ಬಳಿಬಂದು ತೋರಿಸುತ್ತಿದ್ದರು. ಯಾರಿಂದಲೂ ಒಂದು ದಮ್ಮಡಿಯನ್ನೂ ಮುಟ್ಟದೆ ದನಕರುಗಳಿಗೆ ಮದ್ದುನೀಡುತ್ತಿದ್ದ ಕಾವಲಯ್ಯನವರು ನಮ್ಮ ಊರಿನ ಪಶುವೈದ್ಯರೂ ಆಗಿದ್ದರು. ಊರ ಮುಂದಲ ಕಲ್ಲುಬಾವಿಯ ಮುಂದೆ ಕಾವಲಯ್ಯನವರು ನಿಂತಿದ್ದರೆ ಸಾಕು, ಊರಿನ ಎಮ್ಮೆ ದನಗಳೆಲ್ಲ ತಾವಾಗಿಯೇ ಬಂದು ಅವರನ್ನು ಸುತ್ತುವರೆಯುತ್ತಿದ್ದವು. ಕಾವಲಯ್ಯನವರು ಅವುಗಳ ಭಾಷೆಯಲ್ಲಿಯೇ ಮಾತನಾಡುತ್ತಾ, ಅವುಗಳ ಮೈ ಉಜ್ಜುತ್ತಾ ನಿಂತಿರುವುದನ್ನು ನೋಡುವುದೇ ಒಂದು ಆನಂದದ ದೃಶ್ಯವಾಗಿತ್ತು. ಇದು ಮತ್ತೆ ಮತ್ತೆ ನೆನಪಿಸಿಕೊಳ್ಳುವ ದೃಶ್ಯವೂ ಆಗಿ ನನ್ನೊಳಗೆ ಕದಲದೆ ನಿಂತಿದೆ. ಋತುಮಾನಗಳು ಬದಲಾಗಬಹುದು! ಆದರೆ ಕಾವಲಯ್ಯನವರ ಈ ಕಾಯಕದಲ್ಲಿ ಒಂದು ಮೊನೆಯಷ್ಟೂ ಬದಲಾಗುತ್ತಿರಲಿಲ್ಲ. ಇದಕ್ಕೆ ಪ್ರತಿಯಾಗಿ ಕಾವಲಯ್ಯನವರು ಯಾರಿಂದಲೂ ಕಾಸು ಕರೆಮಣೆ ಅಂತ ತೆಗೆದುಕೊಳ್ಳುತ್ತಿರಲಿಲ್ಲ. ಯಾರಾದರೂ ಕರೆದು ಕೊಟ್ಟರೆ ಮಾತ್ರ ಊಟ ಮಾಡುತ್ತಿದ್ದರೇ ಹೊರತು, ಕೈಚಾಚಿ ಬೇಡುತ್ತಿರಲಿಲ್ಲ. ಅಂತಹ ಸ್ವಾಭಿಮಾನದ ಬದುಕು ಅವರದು. ಆದರೆ ನಮ್ಮ ಊರು ಇವರನ್ನು ಎಂದಿಗೂ ಹಸಿವಿನಿಂದ ಮಲಗಿಸಿರಲಿಲ್ಲ. ಕೋರೆ ಜೇಬು ಇದ್ದ ಒಂದು ಖಾದಿ ಬನೀನು, ಒಂದು ಖಾಕಿ ಚಡ್ಡಿ, ಹೆಗಲ ಮೇಲೆ ಒಂದು ವಲ್ಲಿ. ಇದಿಷ್ಟೆ ಅವರ ಚಿರಾಸ್ತಿಯಾಗಿತ್ತು. ಊರಿನಲ್ಲಿ ನಡೆಯುವ ಮದುವೆ ಮತ್ತು ಸಾವಿನ ಸಂದರ್ಭಗಳಲ್ಲಿ ಎಲ್ಲ ವಿಧಿವಿಧಾನಗಳು ಕಾವಲಯ್ಯ ಮತ್ತು ರವಳಪ್ಪನವರ ಮುಂದಾಳ್ತನದಲ್ಲೇ ನಡೆಯುತ್ತಿದ್ದವು. ಅಷ್ಟರ ಮಟ್ಟಿಗೆ ಊರು ಇವರನ್ನು ತನ್ನವರನ್ನಾಗಿ ಮಾಡಿಕೊಂಡಿತ್ತು.

ಮತ್ತೊಬ್ಬರು ರವಳಪ್ಪನವರು. ಇವರನ್ನು ಎಲ್ಲರೂ ಭಜನೆ ರವಳಪ್ಪ ಎಂದೇ ಕರೆಯುತ್ತಿದ್ದರು. ಸಂಜೆ ರಾತ್ರಿಯಾಗಿ ಪರಿವರ್ತನೆಯಾಗುತ್ತಿದ್ದಂತೆ ಕೇರಿಯ ನಡುವೆ ಇದ್ದ ಭಜನೆ ಮನೆಯಲ್ಲಿ ಏಕತಾರಿ ಮೀಟುತ್ತಾ ತನ್ನಪಾಡಿಗೆ ತಾನು ಹಾಡುತ್ತಾ ಕುಳಿತುಬಿಡುವ ಯೋಗಿಯಂತಿದ್ದರು. ಇವರಿಗೆ ಸಾಥಿಯಾಗಿ ಸಗನಯ್ಯನವರು, ಹಳ್ಳಿಕಾರರಕಂಚಿನಮ್ಮ ಮತ್ತು ಕಾವಲಯ್ಯನವರು ಇರುತ್ತಿದ್ದರು. ವಿಶೇಷವಾಗಿ ಊರಿನಲ್ಲಿ ಯಾರ ಮನೆಯಲ್ಲಾಗಲಿ ಸಾವು ಸಂಭವಿಸಿದರೆ, ಅಲ್ಲಿ ರವಳಪ್ಪ ತಮ್ಮ ಏಕತಾರಿಯೊಂದಿಗೆ ಹಾಜರಾಗುತ್ತಿದ್ದರು. ಇಡೀ ರಾತ್ರಿ